# ಆಹಾರ ಸಂಸ್ಕರಣ ಘಟಕಗಳಲ್ಲಿ ಬಂಡವಾಳ ಹೂಡಿಕೆ

ಕರ್ನಾಟಕ ರಾಜ್ಯದ ವೈವಿಧ್ಯಮಯ ಹಾಗೂ ಸೂಕ್ತವಾದ ನೈಸರ್ಗಿಕ ಹವಾಮಾನದಿಂದಾಗಿ ಇಲ್ಲಿ ವಿವಿಧ ರೀತಿಯ ಹಣ್ಣುಗಳು, ತರಕಾರಿಗಳು, ಮಸಾಲೆ ಸಾಮಾನುಗಳು ಮತ್ತು ಕೃಷಿ ಉತ್ಪನ್ನಗಳನ್ನು ಬೆಳೆಯಲಾಗುತ್ತಿದೆ. ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳನ್ನು ಸಂಸ್ಕರಣ ಮಾಡುವ ಉದ್ಯಮಗಳನ್ನು ಸ್ಥಾಪಿಸಲು ಕರ್ನಾಟಕದಲ್ಲಿ ಒಳ್ಳೆಯ ಅವಕಾಶವಿದ್ದು, ಅವುಗಳನ್ನು ಉತ್ತೇಜಿಸುವುದು ಅವಶ್ಯಕವಿರುತ್ತದೆ. ಇಂತಹ ಘಟಕಗಳಿಂದ ಗ್ರಾಮೀಣ ಮತ್ತು ಚಿಕ್ಕ ಪಟ್ಟಣ ಪ್ರದೇಶಗಳಲ್ಲಿ ಸಾಕಷ್ಟು ಉದ್ಯೋಗವಕಾಶ ನಿರ್ಮಾಣವಾಗುವ ಸಾಧ್ಯತೆ ಇರುತ್ತದೆ. ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳ ಸಂಸ್ಕರಣ ಘಟಕಗಳಿಗೆ ಪ್ರೋತ್ಸಾಹ ನೀಡುವುದಕ್ಕಾಗಿ 2010-11 ರ ಆಯವ್ಯಯದಲ್ಲಿ ಶೇ.25 ರಷ್ಟು ಬಂಡವಾಳ ಹೂಡಿಕೆಯ ಯೋಜನೆಯನ್ನು ಪ್ರಕಟಿಸಲಾಗಿರುತ್ತದೆ. ಈ ಉದ್ದೇಶಕ್ಕಾಗಿ ಲೆಕ್ಕ ಶೀರ್ಷಿಕೆ 4851-00-102-015 ಅಡಿಯಲ್ಲಿ ರೂ.500 ಲಕ್ಷಗಳನ್ನು ಹಂಚಿಕೆ ಮಾಡಲಾಗಿದೆ.

ಆಹಾರ ಸಂಸ್ಕರಣ ಘಟಕಗಳಲ್ಲಿ ಬಂಡವಾಳ ಹೂಡಿಕೆ ಮಾಡುವ ಯೋಜನೆಯನ್ನು ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮ (KSIIDC) ದ ಮುಖಾಂತರ ಅನುಷ್ಠಾನ ಗೊಳಿಸಬಹುದಾಗಿದ್ದು, ಲೆಕ್ಕ ಶೀರ್ಷಿಕೆ 4851-00-102-015 ಅಡಿಯಲ್ಲಿ ನೀಡಲಾದ ರೂ.500 ಲಕ್ಷಗಳನ್ನು KSIIDC ಸಂಸ್ಥೆಯಲ್ಲಿ ಠೇವಣಿಯಾಗಿ ಇಟ್ಟು ಖರ್ಚು ಮಾಡಬಹುದಾಗಿರುತ್ತದೆ.

**ಈ ಯೋಜನೆಯನ್ನು ಈ ಕೆಳಗಿನ ಮಾರ್ಗಸೂತ್ರಗಳ ಪ್ರಕಾರ ಅನುಷ್ಠಾನಗೊಳಿಸಬಹುದಾಗಿದೆ:**

1. ಕೈಗಾರಿಕೆಗಳಿಗೆ ರಿಯಾಯಿತಿ ಮತ್ತು ಪ್ರೋತ್ಸಾಹಗಳನ್ನು ನೀಡುವುದಕ್ಕಾಗಿ ಹೊಸ ಕೈಗಾರಿಕಾ ನೀತಿ 2009-14 ನ್ನು ಪ್ರಕಟಿಸಲಾಗಿದ್ದು, ಈ ನೀತಿಯಲ್ಲಿ ಕೈಗಾರಿಕೆಗಳಿಗೆ ರಿಯಾಯಿತಿ ಮತ್ತು ಪ್ರೋತ್ಸಾಹಗಳನ್ನು ನೀಡುವುದಕ್ಕಾಗಿ 4 ವಲಯಗಳನ್ನಾಗಿ ರಾಜ್ಯದ 176 ತಾಲ್ಲೂಕುಗಳನ್ನು ವಿಂಗಡಿಸಲಾಗಿರುತ್ತದೆ. ಆದರೆ ಕೃಷಿ ಮತ್ತು ಆಹಾರ ಸಂಸ್ಕರಣ ಘಟಕಗಳಲ್ಲಿ ಬಂಡವಾಳ ಹೂಡಿಕೆ ಯೋಜನೆಯನ್ನು ರಾಜ್ಯದ ಎಲ್ಲಾ 176 ತಾಲ್ಲೂಕುಗಳಿಗೆ ವಿಸ್ತರಿಸಬಹುದಾಗಿರುತ್ತದೆ.

34

2. ಕೃಷಿ ಮತ್ತು ಆಹಾರ ಸಂಸ್ಕರಣ ಘಟಕಗಳಲ್ಲಿ ಕನಿಷ್ಠ ರೂ.10 ಲಕ್ಷಗಳನ್ನು ಬಂಡವಾಳ ಹೂಡಿಕೆ ಮಾಡುವ ಘಟಕಗಳಲ್ಲಿ ಶೇ.25 ರಷ್ಟು ಮೊತ್ತದ ಬಂಡವಾಳವನ್ನು ಈಕ್ವಿಟಿ ರೂಪದಲ್ಲಿ KSIIDC ಸಂಸ್ಥೆಯು ಮಾಡಬಹುದಾಗಿರುತ್ತದೆ.

3. ವ್ಯವಸ್ಥಾಪಕ ನಿರ್ದೇಶಕರು, KSIIDC ಅವರ ಅಧ್ಯಕ್ಷತೆಯಲ್ಲಿ ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಅಪರ ನಿರ್ದೇಶಕರು (ಎಂಎಸ್ಎಂಇ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಮತ್ತು ವಿಶೇಷಾಧಿಕಾರಿ, ಆಹಾರ ಕರ್ನಾಟಕ ನಿಯಮಿತ ಈ ಸದಸ್ಯರನ್ನೊಳಗೊಂಡ ಸಮಿತಿಯು ಯೋಜನೆಗಳನ್ನು ಪರಿಶೀಲಿಸಿ, ಬಂಡವಾಳ ಹೂಡಿಕೆ ಮಾಡಬಹುದಾಗಿರುತ್ತದೆ.

4. ರಾಜ್ಯದಲ್ಲಿ ಸ್ಥಾಪಿಸಲಾಗುತ್ತಿರುವ ಆಹಾರ ಪಾರ್ಕ್‌ಗಳಲ್ಲಿ ಸ್ಥಾಪಿತವಾಗುತ್ತಿರುವ ಘಟಕಗಳಿಗೂ ಈ ಯೋಜನೆಯನ್ನು ವಿಸ್ತರಿಸಬಹುದಾಗಿರುತ್ತದೆ.

5. ಕೈಗಾರಿಕೆಗಳಲ್ಲಿ ಹೂಡಲಾದ ಬಂಡವಾಳವನ್ನು 10 ವರ್ಷಗಳ ನಂತರ ಸರ್ಕಾರಕ್ಕೆ ಹಿಂದಿರುಗಿಸುವ ಅವಕಾಶವನ್ನು ಘಟಕಗಳಿಗೆ ನೀಡಬಹುದಾಗಿರುತ್ತದೆ.

6. ಸರ್ಕಾರದ ಬಂಡವಾಳ ಹೂಡಿಕೆಗೆ ಘಟಕಗಳು ಕನಿಷ್ಠ ಶೇ.5 ರಷ್ಟು ಡಿವಿಡೆಂಡ್ ರೂಪದಲ್ಲಿ ವಾರ್ಷಿಕವಾಗಿ ಹಣ ನೀಡಬೇಕು.

*****